**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ.**

**ಸಿ.ಸಿ ಸಂಖ್ಯೆ :: 276/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಅಬೀದ್ | **PW-01** |
| **ತಂದೆಯ ಹೆಸರು** | : | ಮಹಮದ್ ಎ.ಎಮ್ | **CW-01** |
| **ವಯಸ್ಸು** | : | 31 ವರ್ಷ | |
| **ಉದ್ಯೋಗ** | : | ಮೆಡಿಕಲ್ ಶಾಪ್ | |
| **ವಾಸಸ್ಥಳ** | : | ಅಡ್ಡಗದ್ದೆ, ಶೃಂಗೇರಿ ತಾ. | |

**ದಿನಾಂಕಃ05-02-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: A.P.P ರವರಿಂದ ::**

ದಿಃ 23-06-2025 ರಂದು ಸಂಜೆ 7.30 ಗಂಟೆಗೆ ಅಡ್ಡಗದ್ದೆಯಲ್ಲಿರುವ ನಮ್ಮ ಮನೆಯಿಂದ ನನ್ನ ತಂದೆ ಮಸೀದಿಗೆ ಹೋಗುತ್ತಿದ್ದರು. ಆ ಸಮಯದಲ್ಲಿ ಸುಮಾರು 7.45 ಗಂಟೆಗೆ ಎ.ಒನ್-ಬನಾನ್ ಚಿಪ್ಸ್ ಬಳಿ ನನ್ನ ತಂದೆ ನ್ಯಾಷನಲ್ ಹೈವೇ-169 ರಲ್ಲಿ ಎಡಬದಿಯಲ್ಲಿ ಮಸೀದಿಗೆ ನಡೆದುಕೊಂಡು ಹೋಗುವಾಗ ಅವರ ಹಿಂಬದಿಯಿಂದ ಬಂದ ಶೃಂಗೇರಿ-ಕೊಪ್ಪ ಕಡೆಗೆ ಹೋಗುತ್ತಿದ್ದ ಕೆ.ಎ-20/ಎಮ್ -9845 ಆಲ್ಟೋ ಕಾರ್ ನ ಚಾಲಕ ಸದರಿ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸುತ್ತಿದ್ದ ಪರಿಣಾಮ ನನ್ನ ತಂದೆಗೆ ಹಿಂದಿನಿಂದ ಡಿಕ್ಕಿ ಹೊಡೆದರು. ಸದರಿ ಅಪಘಾತದಿಂದ ನನ್ನ ತಂದೆಯ ತಲೆಗೆ ಮತ್ತು ಸೊಂಟಕ್ಕೆ ಮತ್ತು ಕಾಲಿಗೆ ತೀವ್ರ ಸ್ವರೂಪದ ಗಾಯಗಳು ಆದವು.

ನಂತರ ನಾನು ತಕ್ಷಣ ಚಾಸಾ-8 ರವರೊಂದಿಗೆ ನನ್ನ ತಂದೆಯನ್ನು ಓಮಿನಿ ಕಾರ್ ನಲ್ಲಿ ಶೃಂಗೇರಿಯಲ್ಲಿರುವ ಅಭಿನವ ವಿದ್ಯಾತೀರ್ಥ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದೆವು. ವೈದ್ಯರು ನನ್ನ ತಂದೆಯನ್ನು ಪರೀಕ್ಷಿಸಿ ಅವರು ಮರಣ ಹೊಂದಿರುವುದಾಗಿ ನನಗೆ ತಿಳಿಸಿದರು.

ನಂತರ ಅದೇ ದಿನ ನಾನು ಪೋಲೀಸ್ ಠಾಣೆಗೆ ರಾತ್ರಿ 9.00 ಗಂಟೆಗೆ ಹಾಜರಾಗಿ ದೂರು ನೀಡಿರುತ್ತೇನೆ. ಈಗ ಸಾಕ್ಷಿಯು ಸದರಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ-1(ಎ) ಎಂದು ಗುರುತಿಸಲಾಯಿತು.

ನಂತರ ದಿಃ24-06-2025 ರಂದು ಪೋಲೀಸಿನವರು ಅಪಘಾತ ನಡೆದ ಸ್ಥಳಕ್ಕೆ ಬಂದಿದ್ದರು. ಆ ಸಂದ ರ್ಭದಲ್ಲಿ ನಾನು ಸಹ ಹಾಜರಿದ್ದೆ. ಸದರಿ ಅಪಘಾತವಾದ ಸ್ಥಳವನ್ನು ಚಾಸಾ-8 ರವರು ತೋರಿಸಿದಂತೆ ಪೋಲೀಸರು ಸ್ಥಳದಲ್ಲಿಯೇ ಪಂಚ ಸಾಕ್ಷಿದಾರರಾದ ಚಾಸಾ-9 ಮತ್ತು ಚಾಸಾ-10 ರವರ ಸಮಕ್ಷಮ ಸ್ಥಳದಲ್ಲಿಯೇ ಸ್ಥಳ ಪಂಚನಾಮೆಯನ್ನು ಬರೆದುಕೊಂಡರು. ಅದೇ ಸಂದರ್ಭದಲ್ಲಿ ಪೋಲೀಸರು ಸ್ಥಳದಲ್ಲಿಯೇ ಬಿದ್ದಿದ್ದ ನನ್ನ ತಂದೆಯ 1 ಜೊತೆ ಚಪ್ಪಲಿಯನ್ನು ಅಮಾನತು ಪಡಿಸಿಕೊಂಡರು. ಸದರಿ ಸ್ಥಳ ಮತ್ತು ಅಮಾನತು ಪಂಚನಾಮೆಯನ್ನು ಸಂಜೆ 6 ಗಂಟೆಯಿಂದ ಸಂಜೆ 7 ಗಂಟೆವರೆಗೂ ಪೋಲೀಸರು ದಾಖಲಿಸಿಕೊಂಡರು.

ಈಗ ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಅದೇ ಸಂದರ್ಭದಲ್ಲಿ ಪೋಲೀಸರು 2 ಭಾವ ಚಿತ್ರಗಳನ್ನು ತೆಗೆದುಕೊಂಡರು ಸಾಕ್ಷಿಯು ಸದರಿ ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮೃತರ ಒಂದು ಜೊತೆ ಚಪ್ಪಲಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮು.ಮಾ-1 ಮತ್ತು 2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರೇ ಆ ದಿನ ಅಪಘಾತ ಮಾಡಿದ ಕಾರನ್ನು ಓಡಿಸುತ್ತಿದ್ದ ಚಾಲಕರು ಎಂದು ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು.)

**::ಪಾಟೀಸವಾಲು :: A P P ರವರಿಂದ ::**

ದಿನಾಂಕ 23-06-2025 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನನ್ನ ಮುಂದುವರಿದ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತಾರೆ ಎಂದರೆ ಸರಿ.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ.H.R.U ವಕೀಲರಿಂದ ::**

ಶೃಂಗೇರಿಯಿಂದ ಕೊಪ್ಪಕ್ಕೆ ಹೋಗುವ ನ್ಯಾಷನಲ್ ಹೈವೇ-169 ರಲ್ಲಿ ಸಿಗುವ ಅಡ್ಡಗದ್ದೆಯ ಎಡಭಾಗದಲ್ಲಿ ನಮ್ಮ ಮನೆ ಇದೆ ಎಂದರೆ ಸರಿ ಹಾಗೂ ಸದರಿ ರಸ್ತೆಯ ಬಲ ಭಾಗಕ್ಕೆ ಮಸೀದಿ ಎಂದರೆ ಸರಿ. ನಮ್ಮ ಮನೆಯ ಸುತ್ತ ಮುತ್ತ ಸುಮಾರು 50 ಮನೆಗಳಿವೆ ಎಂದರೆ ಸರಿ. ಚಾಸಾ-8 ರವರ ಮನೆ ಸಹ ನಮ್ಮ ತಂದೆಯ ಮನೆಯ ಬಳಿಯೇ ಇದೆ ಎಂದರೆ ಸರಿ. ಚಾಸಾ-8 ರವರು ನಮ್ಮ ಸಂಬಂಧಿಕರು ಎಂದರೆ ಸರಿ. ನ್ಯಾಷನಲ್ ಹೈವೇ-169 ರಸ್ತೆಯು ಎ.ಒನ್ ಚಿಪ್ಸ್ ಅಂಗಡಿಯಿಂದ ಸುಮಾರು 1 ಕಿ.ಮೀ ಉದ್ದ ನೇರವಾದ ರಸ್ತೆ ಇದೆ ಎಂದರೆ ಸರಿ. ಸದರಿ ನ್ಯಾಷನಲ್ ಹೈವೇ-169 ರ ರಸ್ತೆಯಲ್ಲಿ ಡಿವೈಡರ್ ಇರುವುದಿಲ್ಲ ಎಂದರೆ ಸರಿ.

2. ನನ್ನ ಮೆಡಿಕಲ್ ಶಾಪ್ ಅಡ್ಡಗದ್ದೆ ಗ್ರಾಮ ಪಂಚಾಯಿತಿಯ ಕಛೇರಿಯ ಮುಂಭಾಗ ಅಂದರೆ ರಸ್ತೆಯ ಎದುರುಭಾಗದಲ್ಲಿದೆ ಎಂದರೆ ಸರಿ. ನನ್ನ ಮೆಡಿಕಲ್ ಶಾಪ್ ಇಂದ ಅಪಘಾತವಾದ ಸ್ಥಳ ಸುಮಾರು 150 ರಿಂದ 200 ಮೀಟರ್ ದೂರದಲ್ಲಿದೆ ಎಂದರೆ ಸರಿ. ನಾನು ಮೆಡಿಕಲ್ ಶಾಪ್ ಅನ್ನು ಬೆಳಗ್ಗೆ 9.00 ರಿಂದ ರಾತ್ರಿ 9.00 ರ ವರೆವಿಗೂ ತೆರೆದಿರುತ್ತೇನೆ. ನನ್ನ ಅಂಗಡಿಯಲ್ಲಿ ನಾನು ಪರವಾನಗಿ ಹೊಂದಿರುವುದರಿಂದ ಗ್ರಾಹಕರಿಗೆ ಔಷಧಿಗಳನ್ನು ನಾನೇ ನೀಡಬೇಕಾಗಿರುತ್ತದೆ ಎಂದರೆ ಸರಿ. ಸದರಿ ಅಡ್ಡಗದ್ದೆ ಬಳಿ ಸಾಗುವ ನ್ಯಾಷನಲ್ ಹೈವೇ-169 ರ ರಸ್ತೆ ಸಮದಟ್ಟು ಪ್ರದೇಶದಲ್ಲಿ ಮತ್ತು ನೇರವಾದ ರಸ್ತೆಯಾಗಿರುತ್ತದೆ ಎಂದರೆ ಸರಿ. ಸದರಿ ಪ್ರದೇಶದಲ್ಲಿ ನ್ಯಾಷನಲ್ ಹೈವೇ-169 ಆಗಿರುವುದರಿಂದ ವಾಹನಗಳು 60 ರಿಂದ 80 ಕಿ.ಮೀ ವೇಗದಲ್ಲಿ ಚಲಿಸುತ್ತವೆ ಎಂದರೆ 60 ಕಿ.ಮೀ ವೇಗದಲ್ಲಿ ಚಲಿಸುತ್ತದೆ ಎಂದು ನುಡಿಯುತ್ತಾರೆ.

3. ಸದರಿ ರಸ್ತೆಯು ನ್ಯಾಷನಲ್ ಹೈವೇ -169 ಆಗಿರುವುದರಿಂದ ಪಾದಚಾರಿಗಳು ರಸ್ತೆಯನ್ನು ದಾಟಬೇಕಾದರೆ ಎರಡೂ ಬದಿಗಳಲ್ಲಿ ವಾಹನಗಳು ಚಲಿಸುತ್ತಿರುವ ಬಗ್ಗೆ ಖಾತರಿ ಪಡಿಸಿಕೊಂಡು ಜಾಗರೂಕತೆಯಿಂದ ರಸ್ತೆ ದಾಟಬೇಕಾಗುತ್ತದೆ ಎಂದರೆ ಸರಿ. ದಿಃ 23-06-2025 ರಂದು ಅಪಘಾತವಾಗುವ ವೇಳೆಗೆ ಮಳೆ ಬರುತ್ತಿತ್ತು ಎಂದರೆ ಸರಿ. ನಮ್ಮ ಮನೆಯಿಂದ ಮಸೀದಿಗೆ ಸುಮಾರು 150 ರಿಂದ 200 ಮೀಟರ್ ಅಂತರವಿದೆ.

4. ನಮ್ಮ ತಂದೆಯವರು ಸದರಿ ದಿನಾಂಕದಂದು ಮನೆಯಿಂದ ಮಸೀದಿಗೆ ಛತ್ರಿ ಹಿಡಿದುಕೊಂಡು ಹೋಗುತ್ತಿದ್ದರು. ಅಪಘಾತವಾದ ಸಂದರ್ಭದಲ್ಲಿ ನಾನು ನನ್ನ ಮೆಡಿಕಲ್ ಶಾಪ್ ನಿಂದ ಹೊರಗಡೆ ಮುಂಭಾಗದಲ್ಲಿ ಇದ್ದೆ. ಅಪಘಾತ ಸ್ಥಳದಲ್ಲಿ ಟಾರ್ ರಸ್ತೆಯು ಸುಮಾರು 40 ಅಡಿ ಅಗಲವಿದೆ ಎಂದರೆ ಸರಿ. ನಾನು 4 ಚಕ್ರ ವಾಹನವನ್ನು ಓಡಿಸುತ್ತೇನೆ. ಸಾಧಾರಣವಾಗಿ ಹೈವೇ ರಸ್ತೆಗಳಲ್ಲಿ ಎದುರುನಿಂದ ಬರುವ ವಾಹನಗಳು ಹೈಬೀಮ್ ಲೈಟ್ ಅನ್ನು ಹಾಕಿಕೊಂಡು ಬಂದಾಗ ಎದುರಿಗೆ ಬರುವ ವಾಹನ ಸವಾರರಿಗೆ ಅವರ ಮುಂದಿನ ರಸ್ತೆಯ ಭಾಗ ಮಬ್ಬು ಮಬ್ಬಾಗಿ ಕಾಣುತ್ತದೆ ಎಂದರೆ ಸರಿ. ಅಪಘಾತವಾದ ಸಂದರ್ಭದಲ್ಲಿ ಶೃಂಗೇರಿಯಿಂದ ಕೊಪ್ಪ ಮತ್ತು ಕೊಪ್ಪದಿಂದ ಶೃಂಗೇರಿಯ ಕಡೆಗೆ ವಾಹನಗಳು ದಟ್ಟನೆಯಿಂದ ಸಾಗುತ್ತಿದ್ದವು ಎಂದರೆ ದಟ್ಟನೆ ಇರಲಿಲ್ಲ, ಆದರೆ ವಾಹನಗಳು ಓಡಾಡುತ್ತಿದ್ದವು ಎಂದು ನುಡಿಯುತ್ತಾರೆ.

5. ಸದರಿ ಅಪಘಾತವಾದ ಸಂದರ್ಭದಲ್ಲಿ ನನ್ನ ತಂದೆ ನ್ಯಾಷನಲ್ ಹೈವೇ -169 ಪಕ್ಕದಲ್ಲಿರುವ ಮಣ್ಣಿನ ರಸ್ತೆಯಲ್ಲಿದ್ದರು. ನನ್ನ ತಂದೆ ಮಸೀದಿಗೆ ಹೋಗುವ ಅವಸರದಲ್ಲಿ ಅವರು ಛತ್ರಿಯನ್ನು ಹಿಡಿದುಕೊಂಡು ಹೋಗುತ್ತಿದ್ದರಿಂದ ರಸ್ತೆಯ ಎರಡೂಬದಿಗಳಲ್ಲಿ ಬರುತ್ತಿದ್ದ ವಾಹನಗಳನ್ನು ನೋಡದೇ ತರಾ ತುರಿಯಲ್ಲಿ ರಸ್ತೆಯನ್ನು ದಾಟಿದ ಕಾರಣ ಈ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಮನೆಯಿಂದ ಮಸೀದಿಗೆ ಹೊರಟಾಗ ಸದರಿ ನ್ಯಾಷನಲ್ ಹೈವೇ -169 ರಸ್ತೆಯ ದಾಟುವ ಎರಡೂ ಬದಿಯಲ್ಲಿ ವಾಹನಗಳು ಬರುತ್ತಿದುದನ್ನು ಗಮನಿಸಿ ತದ ನಂತರ ರಸ್ತೆ ದಾಟಿದರೇ ಎಂಬ ವಿಚಾರ ನನಗೆ ತಿಳಿದಿರುವುದಿಲ್ಲ ಎಂದರೆ ಸರಿ.

6. ನನ್ನ ತಂದೆಯವರು ಅಜಾಗರೂಕತೆಯಿಂದ ರಸ್ತೆ ದಾಟಲು ಪ್ರಯತ್ನಿಸಿದ್ದರಿಂದ ಸದರಿ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿರುವ ನಕ್ಷೆಯ ಪ್ರಕಾರ ನನ್ನ ತಂದೆಗೆ ಅಪಘಾತ ಸದರಿ ನ್ಯಾಷನಲ್ ಹೈವೇ -169 ರಲ್ಲಿ ಹೋಗುವಾಗ ಸಂಭವಿಸಿರುತ್ತದೆ ಎಂದರೆ ಸರಿ. ಸದರಿ ವಿಚಾರವನ್ನು ನಾನು ಓದಿ ತಿಳಿದುಕೊಂಡು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಚಾಸಾ-8 ರವರು ಅಪಘಾತ ಸ್ಥಳಕ್ಕೆ ನಾನು ಬರುವುದಕ್ಕೂ ಮುಂಚೆ ಬಂದಿದ್ದರು. ಆ ಸಂದರ್ಭದಲ್ಲಿ ಎ.ಒನ್ ಚಿಪ್ಸ್ ಅಂಗಡಿ ತೆರೆದಿತ್ತು. ಎ.ಒನ್ ಚಿಪ್ಸ್ ಅಂಗಡಿಯ ಅಕ್ಕ-ಪಕ್ಕ ಯಾವುದೇ ಬೇರೆ ಅಂಗಡಿಗಳು ಇರುವುದಿಲ್ಲ.

7. ಅಪಘಾತ ಸ್ಥಳಕ್ಕೆ ನಾನು ಬರುವುದಕ್ಕೂ ಮುಂಚೆ ಬೇರೆ ಜನರು ಅಲ್ಲಿ ಸೇರಿದ್ದರು. ನಾನು ಸ್ಥಳಕ್ಕೆ ಬಂದ ನಂತರ ನನ್ನ ತಂದೆಯವರನ್ನು ಚಿಕಿತ್ಸೆಗಾಗಿ ಓಮಿನಿ ಕಾರಿಗೆ ಕೂರಿಸಿದೆ. ಅಪಘಾತವಾದ ಸ್ಥಳದಲ್ಲಿ ನನ್ನ ತಂದೆ ಧರಿಸಿದ್ದ ಚಪ್ಪಲಿಗಳು ಅಲ್ಲಿಯೇ ದೂರದಲ್ಲಿ ಒಂದರಿಂದ ಇನ್ನೊಂದು ಬಿದ್ದಿದ್ದವು. ಆ ಚಪ್ಪಲಿಗಳು ಅಲ್ಲಿಯೇ ಬಿದ್ದಿದ್ದವು. ನಿಪಿ-4 ರಲ್ಲಿರುವ ಭಾವಚಿತ್ರದಲ್ಲಿ ಸದರಿ ಚಪ್ಪಲಿಗಳನ್ನು ಅಕ್ಕ-ಪಕ್ಕದಲ್ಲಿ ಯಾರು ಇಟ್ಟಿದ್ದಾರೆಂದು ನನಗೆ ಗೊತ್ತಿಲ್ಲ.

8. ನನ್ನ ತಂದೆಯ ಮರಣ ನಂತರ ಪರಿಹಾರಕ್ಕಾಗಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತೇವೆ. ನನ್ನ ತಂದೆಯವರ ಅಜಾಗರೂಕತೆಯಿಂದ ರಸ್ತೆ ದಾಟಲು ಪ್ರಯತ್ನ ಪಟ್ಟಿದ್ದರಿಂದ ಸದರಿ ರಸ್ತೆ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.